**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**

**ದೊಡ್ಡಬಳ್ಳಾಪುರ**

**ಓ.ಎಸ್. 10/2019**

**ಪಿ.ಡಬ್ಲ್ಯೂ -2**

| | |
|---|---|
| **ಹೆಸರು** | ಟಿ ವಿ ರವಿ |
| **ತಂದೆಯ ಹೆಸರು** | ಟಿ ವಿ ವಿಶ್ವನಾಥ |
| **ವಯಸ್ಸು** | ಸುಮಾರು 50 ವರ್ಷ |
| **ಉದ್ಯೋಗ** | ಮ್ಯಾನೇಜರ್ |
| **ವಾಸ ಸ್ಥಳ** | ದೊಡ್ಡಬಳ್ಳಾಪುರ |

**ಸಾಕ್ಷಿಗೆ ದಿನಾಂಕ 27.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ನಿಜವಾಗಿದೆ ಮತ್ತು ಸರಿಯಾಗಿದೆ. ಸದರಿ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಪಿಡಬ್ಲೂ-1 ರವರು ಈಗಾಗಲೇ ಗುರುತು ಮಾಡಿರುವ ದಾಖಲೆಗಳನ್ನು ನಾನೂ ಸಹ ಅಳವಡಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾಸ್ವತ್ತು ಪೂರ್ವ-ಪಶ್ಚಿಮಕ್ಕೆ 30 ಅಡಿ ಹಾಗೂ ಉತ್ತರ-ದಕ್ಷಿಣಕ್ಕೆ 10 ಅಡಿ ಇರುತ್ತದೆ. ಪೂರ್ವಕ್ಕೆಃ ಪಿ ಡಬ್ಲೂ ರಸ್ತೆ, ಪಶ್ಚಿಮಕ್ಕೆಃ ನಮ್ಮದೆ ಆದ ಸ್ವತ್ತು, ಉತ್ತರಕ್ಕೆಃ ಕಂನಜರವೇಷನ್ ಎಂದು 10 ಅಡಿ ಬಿಟ್ಟ ಜಾಗದ ನಂತರ ಎಮ್ ಪಿ ಸಿ ರಾಮಮೂರ್ತಿ ರವರ ಸ್ವತ್ತು, ದಕ್ಷಿಣಕ್ಕೆಃ ಎಮ್ ಬಿ ಗುರುದೇವ ರವರ ಸ್ವತ್ತು. ನಿಪಿ-5 ರಲ್ಲಿರುವ ನನ್ನ ಸ್ವತ್ತು ಹಾಗೂ ಪಶ್ಚಿಮಕ್ಕೆ ಉಳಿಕೆಯ ಸ್ವತ್ತನ್ನು ಒಟ್ಟು ಸೇರಿಸಿ 160 ಅಡಿಯಾಗಿರುತ್ತದೆ. ಈ ಎರಡು ಸ್ವತ್ತು ಗಳು ಸರ್ವೇ ನಂ.58/1 ರಲ್ಲಿ ಬರುತ್ತದೆ. ಸರ್ವೇ ನಂ.58/1 ರಲ್ಲಿ ದಾವಾಸ್ವತ್ತು, ಎಮ್ ಬಿ ಗುರುದೇವ ರವರ ಸ್ವತ್ತು ಮತ್ತು ವಿರೇಗೌಡರ ರವರ ಸ್ವತ್ತು ಇರುತ್ತದೆ ಎಂದರೆ ಸರಿ.

ದಿ.14.07.2014 ರಲ್ಲಿ 1 ನೇ ವಾದಿ ಮತ್ತು ಅವರ ಅಣ್ಣ-ತಮ್ಮಂದಿರು ಮಾಡಿಕೊಂಡ ವಿಭಾಗಪತ್ರ (ನಿಪಿ-20) ಪತ್ರದಂತೆ ಬಂದಿರುತ್ತದೆ ಎಂದರೆ ಸರಿ.

ಮೊದಲು ಮಲ್ಲಪ್ಪನವರ ಹೆಸರಿನಲ್ಲಿತ್ತು. ಅವರ ಮರಣದ ನಂತರ ಅವರ ಮೊಮ್ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ, ಆ ಮೂಲಕ ಬಂದ ಸ್ವತ್ತಾಗಿರುತ್ತದೆ. ದಾವಾಸ್ವತ್ತು ದಿ.15.03.1954 ರಲ್ಲಿ ಮಲ್ಲಪ್ಪ ಮತ್ತು ಚಿಕ್ಕಣ್ಣ ರವರು ಮಾಡಿಕೊಂಡಂತಹ ವಿಭಾಗದ ಪತ್ರದ ಸ್ವತ್ತಾಗಿರುತ್ತದೆ ಎಂದರೆ ಸರಿ.

ದಾವಾಸ್ವತ್ತುನ್ನು ವಾದಿಯು ಟಿ ಮಲ್ಲಪ್ಪ ರವರ ಹೆಂಡತಿಯವರಿಂದ ದಿ.04.11.1988 ರಲ್ಲಿ ಖರೀದಿಮಾಡಿರುತ್ತಾರೆ. ಖರೀದಿ ಮಾಡಿರುವ ಸ್ವತ್ತಿನ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ 3 ಅಡಿ ನಂತರ ಟಿ ವಿ ವಿಶ್ವನಾಥ ಮತ್ತು ಟಿ ವಿ ರವಿ ರವರ ಸ್ವತ್ತು, ಉತ್ತರಕ್ಕೆ ಃ ಟಿ ವಿ ವಿಶ್ವನಾಥ ಮತ್ತು ಟಿ ವಿ ರವಿ ರವರ ಸ್ವತ್ತು, ದಕ್ಷಿಣಕ್ಕೆಃ ಈಗ ವಿರೇಗೌಡರ ಸ್ವತ್ತು ಮೊದಲು ಪ್ರಸನ್ನರವರ ಸ್ವತ್ತು. ವಿರೇಗೌಡರ ಸ್ವತ್ತಿಗೆ ಸಂಬಂಧಿಸಿದಂತೆ ದಾವಾ ಸಂಖ್ಯೆ 44/2021 ರಲ್ಲಿ ದಾವೆ ನಡೆಯುತ್ತಿರುತ್ತದೆ ಎಂದರೆ ಸರಿ. ದಾವಾಸ್ವತ್ತು ಮತ್ತು ಪಶ್ಚಿಮಕ್ಕೆ ಇರುವ ವಿಶ್ವನಾಥರವರ ಸ್ವತ್ತು. ದಿ.18.03.1954 ರಲ್ಲಿ ಮಲ್ಲಪ್ಪರವರಿಂದ ಪುಟ್ಟಚೌಡಮ್ಮನವರಿಗೆ ಕ್ರಯವಾಗಿರುತ್ತದೆ ಎಂದರೆ ಸರಿ. ಅದರ ವಿಸ್ತೀರ್ಣವು ಪೂರ್ವ-ಪಶ್ಚಿಮ 160 ಅಡಿ ಹಾಗೂ ಉತ್ತರ-ದಕ್ಷಿಣ 75 ಅಡಿ ಆಗಿರುತ್ತದೆ. ಖರೀದಿಸಿರುವ ಸ್ವತ್ತಿನಲ್ಲಿ ಸರ್ವೇ ನಂ.122/1 ಮತ್ತು 58/1 ಒಳಗೊಂಡಿರುತ್ತದೆ ಎಂದರೆ ಸರಿ. ದಾವಾಸ್ವತ್ತು ಕೇವಲ ಸರ್ವೇ ನಂ.58/1 ಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಸರ್ವೇ ನಂ.122/1, 122/2 ಮತ್ತು 58/1 ರ ಜಾಗವು ಮಲ್ಲಪ್ಪ ಮತ್ತು ಚಿಕ್ಕಣ್ಣ ಮತ್ತು ಸುಬ್ಬರಾಯಪ್ಪ ಎಂಬುವವರು ಖರೀದಿ ಮಾಡಿರುತ್ತಾರೆಂದರೆ ಸರಿ. ಖರೀದಿಸಿದ ಸ್ವತ್ತುಗಳಲ್ಲಿ ಸರ್ವೇ ನಂ.122/1 10 ½ ಗುಂಟೆ, ಸರ್ವೇ ನಂ.122/2 ರಲ್ಲಿ 10 ½ ಗುಂಟೆ ಹಾಗೂ ಸರ್ವೇ ನಂ.58/1 ರಲ್ಲಿ ಪೂರ್ವ-ಪಶ್ಚಿಮ 20 ಗಜ ಮತ್ತು ಉತ್ತರ-ದಕ್ಷಿಣ 100 ಗಜ ಆಗಿರುತ್ತದೆಂದರೆ ಸರಿ. ಖರೀದಿಸಿದ ಸ್ವತ್ತುಗಳನ್ನು ಸರ್ವೇ ನಂ.58/1 ತಿಗಳೆ ಭಾಗ ಆಯಿತು ಹಾಗೂ ಸರ್ವೇ ನಂ.122/1 ಮತ್ತು 122/2 ಖಾಸಬಾಗ ಸೇರಿದ ಸ್ವತ್ತಗಳಾಗಿರುತ್ತವೆ ಹಾಗೂ ಅವು ಕಂದಕಗಳಾಗಿದ್ದವು ಎಂದರೆ ಸರಿ.

1938 ರಲ್ಲಿ ಸುಬ್ಬರಾಯಪ್ಪ ರವರು ಬಿಡುಗಡೆಗೊಂಡು ಹೊರೆಗೆ ಹೋಗಿರುತ್ತಾರೆ. ಮಲ್ಲಪ್ಪ ಮತ್ತು ಚಿಕ್ಕಣ್ಣ ರವರು ದಿ.15.03.1954 ರಲ್ಲಿ ಖರೀದಿಸಿದ ಸ್ವತ್ತುಗಳನ್ನು

ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ನೊಂದಾಯಿತ ವಿಭಾಗದ ಪತ್ರದ ದೃಡೀಕೃತ ಪತ್ರವಾಗಿದ್ದು ಸದರಿ ಪತ್ರದಲ್ಲಿರುವ ನಕ್ಷೆಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ನಕ್ಷೆಯಲ್ಲಿರುವ ಅಳತೆಗಳು ಸರಿಯಾಗಿರುತ್ತದೆ. ಆ ನಕ್ಷೆಯ ಪ್ರಕಾರ ವಿಭಾಗ ಮಾಡಿಕೊಂಡಿರುತ್ತೇವೆ ಹಾಗೂ ನಾವು ಸ್ವಾಧೀನದಲ್ಲಿ ಇರುತ್ತೇವೆ.

ವಾದಿ ದಾವಾಸ್ವತ್ತನ್ನು ಖರೀದಿ ಮಾಡಿದ ನಂತರ ಅದರಲ್ಲಿ ಅಂಗಡಿಗಳನ್ನು ಹಾಕಿಕೊಂಡಿರುತ್ತಾರೆಂದರೆ ಸರಿ. 1988 ರಲ್ಲಿ ಅಂಗಡಿಗಳನ್ನು ಕಟ್ಟಿ ಆಗಿನಿಂದ ಸ್ವಾ ದೀನದಲ್ಲಿರುತ್ತಾರೆ. ಅಂಗಡಿಗಳನ್ನು ಸಂಪೂರ್ಣವಾಗಿ ಕಟ್ಟಿದ ನಂತರ ನಗರಸಭೆಯಿಂದ ಕಟ್ಟಡ ಸಂಪೂರ್ಣವಾಗಿರುವ ಬಗ್ಗೆ ಮುನ್ಸಿಪಾಲಿಟಿರವರಿಗೆ ತಿಳಿಸಿ ಅವರಿಂದ ಕಟ್ಟಡ ಸಂಪೂರ್ಣವಾದ ಬಗ್ಗೆ ಪತ್ರವನ್ನು ತೆಗೆದುಕೊಂಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ ಹಾಗೂ ದಾಖಲೆಗಳು ಹಾಜರುಪಡಿಸಿರುವುದಿಲ್ಲ.

ನಾನು ಸ್ವಾಧೀನದಲ್ಲಿರುವ ಸ್ವದತ್ತಿಗೆ ಸರ್ಕಾರದವರು ರಸ್ತೆ ಮಾಡಲು ಭೂಮಿಯನ್ನು ಒತ್ತುವರಿ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾಸ್ವತ್ತು ಸರ್ಕಾರದ ಸ್ವತ್ತಾಗಿದ್ದು ಅದನ್ನು ಒತ್ತುವರಿ ಮಾಡಿಕೊಂಡು ಅಕ್ರಮ ಸ್ವಾ ಧೀನದಲ್ಲಿರುತ್ತೇವೆಂದರೆ ಸರಿಯಲ್ಲ. ಒಂದು ಗುಂಟೆ 1089 ಅಡಿಗಳು ಇರುತ್ತದೆ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**